ವಿಭಿನ್ನವಾಗಿ ಸಾಹಿತ್ಯ ರಚನೆಗೆ ತೊಡಗಿದ್ದರು. ವೈವಿಧ್ಯಮಯ ಪಾತ್ರಗಳನ್ನು ಅವರು ಸೃಷ್ಟಿಸಿದರು. ಆ ಪಾತ್ರಗಳನ್ನು ನಿರ್ವಹಿಸಿದವರಿಂದ ಅದ್ಭುತ ಅಭಿನಯ ಹೊರ ತೆಗೆದರು. ಮನಕರಗುವ ಸಂಭಾಷಣೆ ಹೇಳಿಸಿದರು. ಸಿಡಿಲು ಬಡಿದಂತಹ ಮಾತುಗಳನ್ನು ಅಪ್ಪಳಿಸುವಂತೆ ಮಾಡಿದರು. ಒಟ್ಟಿನಲ್ಲಿ ಶಾಸ್ತ್ರಿಗಳು 'ಮಾತು' ನಾಟಕಗಳಲ್ಲಿ ಸದ್ದು ಮಾಡಿತು.

ನೋಡುಗರನ್ನು ಬಡಿದೆಬ್ಬಿಸುವ ನಾಟಕಗಳೆಂದರೆ ಶಾಸ್ತ್ರಿಗಳಿಗೆ ಎಲ್ಲಿಲ್ಲದ ಹುರುಪು. ಹೀಗೆ ಇವರ ನಾಟಕಗಳಲ್ಲಿ ಸೀತೆ ವೀರವನಿತೆಯಾದಳು. ರಾವಣ ಪ್ರಚಂಡ ದೈವ ಭಕ್ತರೆನ್ನಿಸಿಕೊಂಡ. ಸಮಾಜದ ಓರೆಕೋರೆಗಳನ್ನು ಪೌರಾಣಿಕ ಪಾತ್ರಗಳಲ್ಲಿ ಅಭಿವ್ಯಕ್ತಿಸುವುದು ಶಾಸ್ತ್ರಿಗಳಿಗೆ ಬಹಳ ಸಹಜವಾಗಿ ಒಲಿದಿತ್ತು.

ಅಪಾರ ಸ್ಮರಣಶಕ್ತಿ ಶಾಸ್ತ್ರಿಗಳಿಗಿತ್ತು. ನಟರಾಗಬೇಕೆಂದು ಕೊಂಡವರು ಸಿನಿಮಾದಲ್ಲಿ ಸಂಕಲನಕಾರರಾಗಿ ಕೆಲಸ ಮಾಡಬೇಕೆಂದು ಇಷ್ಟಪಟ್ಟರು. ಆಗ ಅವರು ಆಶ್ರಯ ಪಡೆದದ್ದು ಖ್ಯಾತ ಸಂಕಲನಕಾರ ರಾಜಾ ಸ್ಯಾಂಡೋ ಅವರ ಹತ್ತಿರ. ನಂತರ ಅವರು ಹೊರಟಿದ್ದು ಸಾಹಿತ್ಯದತ್ತ. ನಾಟಕ ರಚನೆಯನ್ನು ಬಹುಗೇಗ ಕರಗತ ಮಾಡಿಕೊಂಡಿದ್ದ ಅವರು 'ಕೃಷ್ಣಲೀಲಾ' (ನಿರ್ಮಾಣ: ಡಿ. ಶಂಕರ್ ಸಿಂಗ್) ಚಿತ್ರಕ್ಕೆ ಹಾಡುಗಳನ್ನು ಬರೆದರು. ಇದೇ ಅವರು ಚಲನಚಿತ್ರಕ್ಕೆಂದು ಬರೆದ ಮೊದಲ ಗೀತೆ.

ಅಭಿನಯದಿಂದ ಸಾಹಿತ್ಯದತ್ತ ಹೊರಳಿದ ಪ್ರಭಾಕರ ಶಾಸ್ತ್ರಿಗಳು ಆರಂಭದಲ್ಲಿ ಹಲವು ಪೌರಾಣಿಕ ನಾಟಕಗಳನ್ನು ರಚಿಸಿದರು. ಕೆಲವು ನಾಟಕಗಳನ್ನು ಪ್ರದರ್ಶಿಸಲು ತಮ್ಮದೇ ನಾಟಕ ಸಂಘವನ್ನು ಹುಟ್ಟು ಹಾಕಿದರು. ಗೀತೆ ರಚನೆ ಮೂಲಕ ಚಲನಚಿತ್ರ ಜಗತ್ತಿಗೆ ಬಂದ ಅವರು ಕಥೆ, ಚಿತ್ರಕಥೆ, ಸಂಭಾಷಣೆಗಳಲ್ಲಿ ತೊಡಗಿಸಿಕೊಂಡರು. ಬಿ.ಆರ್. ಪಂತಲು ಅವರು ತಮ್ಮ ಚಿತ್ರ ನಿರ್ಮಾಣ ಸಂಸ್ಥೆಯಲ್ಲಿ ಶಾಸ್ತ್ರಿಗಳಿಗೆ ಕಾಯಂ ಬರಹಗಾರನ ನೌಕರಿ ಕೊಟ್ಟರು. ಚಲನಚಿತ್ರಗಳಲ್ಲಿಯೂ ಅಭಿನಯಿಸುತ್ತಿದ್ದ ಕಣಗಾಲರು ಚಿತ್ರ ನಿರ್ಮಾಣಕ್ಕೂ ಕೈಹಾಕಿದರು.

ರಂಗಭೂಮಿ, ಚಿತ್ರರಂಗ ಎರಡು ಕ್ಷೇತ್ರಗಳಲ್ಲಿಯೂ ಕೆಲಸ ಮಾಡುತ್ತಿದ್ದ ಶಾಸ್ತ್ರಿಗಳು ಚಿತ್ರ ನಿರ್ದೇಶನಕ್ಕೂ ಇಳಿದರು. 'ಸತಿಶಕ್ತಿ', 'ಸುಭದ್ರಾ ಕಲ್ಯಾಣ' ಮೊದಲಾದ ಚಿತ್ರಗಳನ್ನು ನಿರ್ದೇಶನ ಮಾಡಿದರು. ಡಾ. ರಾಜ್‌ಕುಮಾರ್ ದ್ವಿಪಾತ್ರಾಭಿನಯ ಮಾಡಿದ್ದ 'ಸತಿಶಕ್ತಿ' ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಚಿತ್ರವಾಗಿ ಮೂಡಿಬಂದಿತ್ತು.

ಪೂರ್ಣ ಪ್ರಮಾಣದ ಸಾಹಿತಿಯಾದ ಶಾಸ್ತ್ರಿಗಳು ಅನೇಕ ಮಹತ್ವದ ನಾಟಕಗಳನ್ನು ರಚಿಸಿದರು. ಚಲನಚಿತ್ರಗಳಿಗೆ ಸಾಹಿತ್ಯ ಬರೆದರು. 300ಕ್ಕೂ ಹೆಚ್ಚು ಚಲನಚಿತ್ರ ಗೀತೆಗಳನ್ನು ಬರೆದರು. ಎಲ್ಲವೂ ಮೌಲ್ಯಯುತ ಸಾಹಿತ್ಯ ಹೊಂದಿದ್ದವು.

ರಂಗಭೂಮಿ, ಚಲನಚಿತ್ರ ಜಗತ್ತು ಎರಡರಲ್ಲೂ ಖ್ಯಾತಿ ಪಡೆದಿದ್ದ ಈ ಪ್ರತಿಭಾವಂತ ಕನ್ನಡ ಪರ ಆಂದೋಲನದಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದರು. ಅವರೊಬ್ಬ ಅಪ್ರತಿಮ ಭಾಷಣಕಾರ. ನೇರ ನುಡಿಗೆ ಹೆಸರಾಗಿದ್ದ ಇವರು ನಿರ್ದಾಕ್ಷಿಣ್ಯ ಪ್ರವೃತ್ತಿಯವರಾಗಿದ್ದು ಅನೇಕ ಸಂದರ್ಭಗಳಲ್ಲಿ ಸಂಕಷ್ಟಗಳಿಗೂ ಸಿಕ್ಕಿಬೀಳುತ್ತಿದ್ದರು.

ಕಷ್ಟ ನಷ್ಟಗಳಿಗೆ ಹೆದರದೆ ಅನ್ನಿಸಿದ್ದನ್ನು ಹೇಳಿಬಿಡುವ ಮನೋಭಾವದ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಇಂದಿಗೂ ಸ್ಮರಿಸುವಂತಹ ಸಾಹಿತ್ಯಕ ಮಹತ್ವದ ಗೀತೆಗಳನ್ನು ಉಳಿಸಿಹೋಗಿದ್ದಾರೆ. ಭಿನ್ನ ಬಗೆಯ ನಾಟಕಗಳೂ ಅವರನ್ನು ಹಸಿರಾಗಿಟ್ಟಿವೆ.

ಚಿತ್ರ: ಪ್ರಗತಿ ಅಶ್ವತ್ಥನಾರಾಯಣ್